# ಶಿಕ್ಷಕರಿಗೂ ಆಟ ಅಗತ್ಯ

ವಿವೇಕ್ ಸುಂದರ್ ಪಿಳ್ಳೈ


ಪುದುಚೆರಿಯ ವಲಯವೊಂದರ ಶಿಕ್ಷಕರೊಡನೆ ಇಂಗ್ಲಿಷ್ ಬೋಧನೆ ಕುರಿತ ಮೂರು ತಿಂಗಳ ನಿರಂತರ ಕಲಿಕೆ ಕಾರ್ಯಕ್ರಮವು (ಸಿಇಪಿ) ಪ್ರಗತಿಯಲ್ಲಿತ್ತು. ಹಲವು ತಿಂಗಳುಗಳ ಲಾಕ್‌ಡೌನ್ ಬಳಿಕ ಶಾಲೆಗಳು ಆಗಷ್ಟೇ ಆರಂಭವಾಗಿದ್ದವು ಮತ್ತು ಶಿಕ್ಷಕರೊಡನೆ ಮುಖಾಮುಖಿ ಕಾರ್ಯಾಗಾರ ನಡೆಸುವ ಸಂದರ್ಭ ದೊರೆತದ್ದರಿಂದ ನಾವೆಲ್ಲರೂ ಖುಷಿಯಾಗಿದ್ದೆವು. ಮೊದಲನೇ ಅಧಿವೇಶನದಲ್ಲಿ ಶಾಲೆಗಳಿಗೆ ಭೇಟಿ ಹಾಗೂ ಪುನರ್ಮನನ (scaffolding) ಕಾರ್ಯಕ್ರಮಗಳೆಂದು ರೂಪಿಸಿಕೊಂಡೆವು. ಆದರೆ ಎರಡನೇ ಅಧಿವೇಶನದ ನಂತರ, ನಾವು ಶಾಲೆಗಳಿಗೆ ಭೇಟಿಗೆ ಸಿದ್ಧವಾಗುವುದಕ್ಕೆ ಮುನ್ನವೇ ಶಾಲೆಗಳು ಮತ್ತೆ ಮುಚ್ಚಲ್ಪಟ್ಟವು.

ತಾವು ಈಗಾಗಲೇ ಕಲಿತಿರುವುದನ್ನೇ ಅನುಷ್ಠಾನಗೊಳಿಸಲು ಶಿಕ್ಷಕರಿಗೆ ಸಾಧ್ಯವಾಗದ ಪರಿಸ್ಥಿತಿ ಇರುವಾಗ, ಅವರನ್ನು ಮತ್ತೆ ತರಬೇತಿಯಲ್ಲಿ ತೊಡಗಿಕೊಳ್ಳುವಂತೆ ಮಾಡಲು ಏನು ಮಾಡಬೇಕು? ಶಾಲೆಗೆ ಮತ್ತೆ ವಾಪಸಾಗುವ ಮಕ್ಕಳು ಎದುರಿಸುವ ಕಲಿಕೆಯಲ್ಲಿನ ಅಂತರವನ್ನು ಮುಚ್ಚಲು ಏನು ಮಾಡಬೇಕು? ನಾವು ಇವೇ ಮೊದಲಾದ ಪ್ರಶ್ನೆಗಳ ಕುರಿತು ಆಲೋಚಿಸುತ್ತಿರುವಾಗಲೇ, ಸಿಇಪಿಯ ವಾಟ್ಸ್‌ಆಪ್ ಗುಂಪನ್ನು ಕ್ರಿಯಾಶೀಲವಾಗಿಡಲು ಶಿಕ್ಷಕರೊಡನೆ ಕೆಲವು ಭಾಷಾ ಆಟಗಳನ್ನು ಆಡುವ ಬಗ್ಗೆ ಆಲೋಚಿಸಿದೆವು. ನಾವು ಈ ಮೊದಲು ಕೆಲವು ಬೋಧನಾ ವಿಚಾರಗಳನ್ನು ಹಂಚಿಕೊಂಡಿದ್ದರೂ ಮತ್ತು ಶಿಕ್ಷಕರನ್ನು ತಮ್ಮ ವಿಚಾರಗಳನ್ನು ಹಂಚಿಕೊಳ್ಳಲು ಆಹ್ವಾನಿಸಿದ್ದರೂ, ಶಿಕ್ಷಕರಿಂದ ತೀರ ಕಡಿಮೆ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಆಟಗಳು, ಗುಂಪಿನಲ್ಲಿ ಸ್ವಲ್ಪ ಉತ್ಸಾಹವನ್ನು ಉಂಟುಮಾಡಬಹುದು ಎಂದು ನಾವು ಭಾವಿಸಿದೆವು

ಈ ಭಾಷಾ ಆಟಗಳು ಕ್ರಮೇಣ ಶಿಕ್ಷಕರಲ್ಲಿ ಹೇಗೆ ಆಸಕ್ತಿ ಮೂಡಿಸಿದವು ಹಾಗೂ ಹೇಗೆ ಹೆಚ್ಚು ಹೆಚ್ಚು ಮಂದಿ ಶಿಕ್ಷಕರು ಪಾಲ್ಗೊಳ್ಳಲಾರಂಭಿಸಿದರು ಎಂಬುದನ್ನು ನಾನು ಇಲ್ಲಿ ಹಂಚಿ–ಕೊಳ್ಳುತ್ತೇನೆ.

**ರಿಬಸ್ ಚತುರ ಪ್ರಶ್ನೆಗಳು:**

ಅಕ್ಷರಗಳು ಹಾಗೂ ಪದಗಳನ್ನು ಬಳಸಿ ರಚಿಸಿದ ಚಿತ್ರಗಳಿಂದ ರಿಬಸ್ ಚತುರ ಪ್ರಶ್ನೆಗಳನ್ನು ರೂಪಿಸಲಾಗುತ್ತದೆ. ನಾವು ಇವುಗಳಲ್ಲಿ ಕೆಲವನ್ನು ವಾಟ್ಸ್‌ಆಪ್ ಗುಂಪಿನಲ್ಲಿ ಹಂಚಿಕೊಂಡೆವು.




ಉದಾಹರಣೆಗೆ, ಮೊದಲಿನ ಚಿತ್ರದ ಉತ್ತರ "Green with Envey" ಎಂದಾದರೆ, ಉಳಿದವುಗಳ ಉತ್ತರವೇನು?

ಇಬ್ಬರು ಶಿಕ್ಷಕರು ತಕ್ಷಣ ಉತ್ತರ ನೀಡಿದರು. ಆದ್ದರಿಂದ ನಾವು ಇನ್ನಷ್ಟು ಚತುರ ಪ್ರಶ್ನೆಗಳನ್ನು ಹಂಚಿಕೊಂಡೆವು. ಮತ್ತೆ ಮೂವರು ಶಿಕ್ಷಕರು ಗುಂಪಿಗೆ ಸೇರ್ಪಡೆಯಾದರು. ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಲು ಆರಂಭದಲ್ಲಿ ಸರಳವಾದ ಒಗಟುಗಳನ್ನು ಕೇಳಿ, ಎಲ್ಲ ಉತ್ತರಗಳಿಗೆ ಪ್ರೋತ್ಸಾಹಕ ಸ್ಮೈಲಿ, ಜಿಫ್ ಚಿತ್ರಗಳನ್ನು ಕೊಟ್ಟು ಉತ್ತೇಜಿಸಿದೆವು ಮತ್ತು ಅವರು ತಪ್ಪು ಉತ್ತರ ನೀಡಿದಾಗ, ಅದನ್ನು ನೇರವಾಗಿ ಹೇಳುವ ಬದಲು ಅವರಿಗೆ ಉತ್ತರಕ್ಕೆ ಸುಳಿವು ನೀಡಿ, ಸರಿ ಉತ್ತರ ಕಂಡುಕೊಳ್ಳಲು ನೆರವಾದೆವು.

ಭಾಷಾ ಒಗಟುಗಳು: ಮಾರನೇ ದಿನ ಶಿಕ್ಷಕರು ಉತ್ತರ ಕಂಡುಕೊಳ್ಳಲು ಅಂತರ್ಜಾಲದ ನೆರವು ಪಡೆದುಕೊಳ್ಳಬಾರದು ಎಂಬ ಷರತ್ತು ಹೇರಿ, ಕೆಲವು ಭಾಷಾ ಒಗಟುಗಳನ್ನು ಹಂಚಿಕೊಂಡೆವು.

ನೀವು ಕೆಳಗಿನ ಒಗಟುಗಳಿಗೆ ಉತ್ತರ ನೀಡಲು ಪ್ರಯತ್ನಿಸುವಿರಾ?

1. "T" ಇಂದ ಆರಂಭವಾಗುವ ಇಂಗ್ಲಿಷಿನ ವಾರದ ನಾಲ್ಕು ದಿನಗಳು ಯಾವುವು?

2. ಇಂಗ್ಲಿಷ್‌ನಲ್ಲಿ ಯಾವಾಗಲೂ ತಪ್ಪಾಗಿ ಕಾಗುಣಿತ ಹೇಳುವ ಪದ ಯಾವುದು?

3. 4 ಅಕ್ಷರಗಳಿಂದ ರಚಿಸಲಾಗುವ, ಆದರೆ 3 ರಿಂದ ರಚಿತವಾಗಿರುವ ಪದ ಯಾವುದು? 8 ಅಕ್ಷರಗಳೊಂದಿಗೆ ಬರೆಯುವುದಾದರೂ 4 ರಿಂದ ಆಗಿರುವ, ಅಪರೂಪವಾಗಿ 6 ಅಕ್ಷರವನ್ನು ಒಳಗೊಂಡಿರುತ್ತದೆ ಮತ್ತು 5 ಅಕ್ಷರಗಳಿಂದ ಬರೆಯಲಾಗದ ಪದ.

4. ವ್ಯಕ್ತಿಯೊಬ್ಬ ಹೇಳುತ್ತಾನೆ, "ನನಗೆ ಸೋದರ–ಸೋದರಿಯರಿಲ್ಲ. ಆದರೆ, ಆ ಮನುಷ್ಯನ ತಂದೆ ನನ್ನ ತಂದೆಯ ಮಗ'. ಆತ ಯಾರ ಬಗ್ಗೆ ಹೇಳುತ್ತಿದ್ದಾನೆ?

ಇನ್ನಿಬ್ಬರು ಹೊಸ ಶಿಕ್ಷಕರು ಸೇರ್ಪಡೆಯಾದರು. ಅವರು ಒಗಟುಗಳನ್ನು ಬಿಡಿಸಿದಂತೆ, ಇನ್ನಷ್ಟು ಒಗಟುಗಳನ್ನು ನೀಡಿದೆವು; ಕ್ಲಿಷ್ಟತೆಯನ್ನು ಕ್ರಮೇಣ ಹೆಚ್ಚಿಸಿದೆವು.

**ಸಾದೃಶ್ಯದ ಚತುರ ಪ್ರಶ್ನೆಗಳು:**

ಶಿಕ್ಷಕರು ಆಸಕ್ತಿ ತೋರಿಸುತ್ತಿದ್ದುದರಿಂದ, ಎಲ್ಲರೂ ಪಾಲ್ಗೊಳ್ಳಲು ಹಾಗೂ ಒಟ್ಟಾಗಿ ಆಡಲು ಅನುಕೂಲವಾಗುವಂತೆ, ಒಂದು ಸಮಯವನ್ನು ನಿಗದಿಗೊಳಿಸಿದೆವು. ಅವರಿಗೆ ಕೆಲವು ಸಾದೃಶ್ಯದ

ಚತುರ ಪ್ರಶ್ನೆಗಳನ್ನು ನೀಡಿ, ಅವುಗಳ ಸ್ಪಷ್ಟ ಉತ್ತರ ಅಂತರ್ಜಾಲದಲ್ಲಿ ಸಿಗದ ಕಾರಣ, ಅಂತರ್ಜಾಲವನ್ನು ಬಳಸಲು ಅನುಮತಿ ಕೊಟ್ಟೆವು: ಹೀಗಿದ್ದರೂ, ಅವರು ಮನಸಿಟ್ಟು ಆಡುವ ಅಗತ್ಯವಿತ್ತು. ಈ ಚತುರ ಸಮಸ್ಯೆಗಳು: ಬಹಳ ಜನಪ್ರಿಯವಾದವು ಮತ್ತು ಶಿಕ್ಷಕರು ಒಂದು ಗಂಟೆಗೂ ಅಧಿಕ ಕಾಲ ಆಟವನ್ನು ಮುಂದುವರಿಸಿದರು. ಅಂತ್ಯದಲ್ಲಿ, ಎಲ್ಲರೂ 'ಮಿದುಳನ್ನು ಚುರುಕು'ಗೊಳಸುವ ಚತುರ ಪ್ರಶ್ನೆಗಳನ್ನು ನೀಡಿದ್ದಕ್ಕಾಗಿ ನಮಗೆ ಧನ್ಯವಾದ ಹೇಳದರು.

**ಕೆಳಗಿನವಕ್ಕೆ ಉತ್ತರ ಹೇಳಲು ಪ್ರಯತ್ನಿಸಿ:**

**109** Import : Export :: Expenditure : ?

- A. Deficit
- B. Revenue
- C. Debt
- D. Tax

**110** Country : President :: State : ?

- A. Governor
- B. Minister
- C. Chief Minister
- D. Citizen

**111** Bread : Yeast :: Curd : ?

- A. Fungi
- B. Bacteria
- C. Germs
- D. Virus

ಹಸುಗಳು ಮತ್ತು ಹೋರಿಗಳು: ಹಸುಗಳು ಮತ್ತು ಹೋರಿಗಳು ಆಟವನ್ನು ಹೇಗೆ ಆಡುವುದು ಎನ್ನುವ ವಿಡಿಯೋ ಮಾಡಿ, ಅದನ್ನು ಗುಂಪಿನಲ್ಲಿ ಹಂಚಿಕೊಂಡೆವು. "ಹೋರಿ" ಸರಿಯಾದ ಸ್ಥಳದಲ್ಲಿರುವ ಸರಿಯಾದ ಅಕ್ಷರವನ್ನು ಹಾಗೂ "ಹಸು" ತಪ್ಪು ಸ್ಥಾನದಲ್ಲಿರುವ ಸರಿಯಾದ ಅಕ್ಷರವನ್ನು ಪ್ರತಿನಿಧಿಸುತ್ತದೆ. ಕೆಳಗಿನ ಚಿತ್ರದಲ್ಲಿ ನೀಡಿದ ಅಂಕಗಳ ಆಧಾರದಿಂದ ಪದವನ್ನು ಊಹಿಸಲು ಸಾಧ್ಯವೇ?

| | |
|---|---|
| ROAD | 1 bull |
| COAT | 1 bull |
| COST | 1 bull, 1 cow |
| GOAT | 1 bull, 1 cow |

ಮಾರನೇ ದಿನ ಕೆಲವು ಮೂರಕ್ಷರದ ಸರಳ ಪದಗಳಿಂದ ಆಟವನ್ನು ಆರಂಭಿಸಿದೆವು. ಅವರಿಗೆ ಆಟದ ರುಚಿ ಹತ್ತಿಸಿದ ಬಳಿಕ, ನಾವು ಶಿಕ್ಷಕರಿಗೆ ನಾಲ್ಕು ಅಕ್ಷರಗಳ ಪದಗಳನ್ನು ಕೊಟ್ಟೆವು. ಇದು ಕಷ್ಟವಿದೆ ಎಂದು ಹೇಳದಾಗ, ಸುಳವು ನೀಡಿದೆವು: ಬಳಕ ಅವರು ಅವುಗಳನ್ನು ಬಿಡಿಸಿದರು. ಅವರ ಆಸಕ್ತಿ ಹೆಚ್ಚಿತು. ಅಂತಿಮವಾಗಿ, ಅವರಿಗೆ "ಮಾಸ್ಟರ್ ಮೈಂಡ್" ಹೆಸರಿನ ಹಲಗೆ ಆಟ (ಬೋರ್ಡ್ ಗೇಮ್) ಪರಿಚಯಿಸಿದೆವು. ಇದರಲ್ಲಿ ಪದಗಳ ಬದಲು ಬಣ್ಣಗಳನ್ನು ಬಳಸಲಾಗಿತ್ತು. ಈ ಆಟಿಕೆಯನ್ನು ಶಿಕ್ಷಕರು ಮಾರುಕಟ್ಟೆಯಲ್ಲಿ ಖರೀದಿಸಬಹುದಾಗಿತ್ತು ಮತ್ತು ಮನೆಯಲ್ಲಿ ಕುಟುಂಬದ ಸದಸ್ಯರೊಂದಿಗೆ ಆಡಬಹುದಿತ್ತು.

**ಯಾವುದು ಸರಿಯಾದ ಪದ?:**

ನಾವು ಶಿಕ್ಷಕರಿಗೆ ಪ್ರಾರಂಭಕ್ಕೆ Tram, Windmill ಸರಳ ಪದಗಳನ್ನು ಊಹಿಸಲು ಹೇಳ, ಅನಂತರ ಕಠಿಣ ಪದಗಳಾದ Irresponsible, witness ಇತ್ಯಾದಿಗೆ ಮುಂದುವರಿದೆವು. ಶಿಕ್ಷಕರು ಈ ಆಟವನ್ನು ಎಷ್ಟು ಇಷ್ಟಪಟ್ಟರೆಂದರೆ, ಮರುದಿನವೂ ಇದೇ ಆಟ ಆಡಿದೆವು: ಈ ಬಾರಿ"ಸರಿಯಾದ ಪದ' ವನ್ನು ಶಿಕ್ಷಕರೇ ಆಲೋಚನೆ ಮಾಡಿ ಹೇಳಲು ಬಿಟ್ಟೆವು.

ಇವು ಸುಳವುಗಳಾದರೆ ಸರಿಯಾದ ಪದ ಯಾವುದು?:

**Amusing, Comical, Funny, Witty, Joke:**

ಅಷ್ಟರಲ್ಲಿ ಆಟಕ್ಕೆ ಸೇರ್ಪಡೆಗೊಂಡು ಆಗಾಗ ಪಾಲ್ಗೊಳ್ಳುತ್ತಿದ್ದ ಶಿಕ್ಷಕರ ಸಂಖ್ಯೆ 7 ಆಗಿತ್ತು. ಇನ್ನಷ್ಟು ಶಿಕ್ಷಕರು ಸೇರುವುದನ್ನು ಉತ್ತೇಜಿಸಲು, ಇಂಥ ಆಟಗಳ ಹಿಂದಿನ ತರ್ಕವನ್ನು ಹಂಚಿಕೊಂಡೆವು: ಇವು ಸ್ವತಃ ಶಿಕ್ಷಕರಿಗೂ ಆಸಕ್ತಿದಾಯಕ, ವಿನೋದಮಯ ಹಾಗೂ ಜ್ಞಾನದಾಯಕವಾಗಿರುವುದರ ಜೊತೆಗೆ ಅವರಿಗೆ ತರಗತಿಗಳ ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳಲು ಬೇಕಾದ ಸಾಧನಗಳು ಹಾಗೂ ಕಲ್ಪನೆಗಳನ್ನು ಇವು ಒದಗಿಸುತ್ತವೆ.

ಪದ ರಚನೆ ಆಟಗಳು: ನಾವು ಶಿಕ್ಷಕರಿಗೆ ಪದದ ಮೊದಲ ಹಾಗೂ ಕೊನೆಯ ಅಕ್ಷರ / ಶಬ್ದವನ್ನು ಕೊಟ್ಟು, ಅದನ್ನು ಬಳಸಿಕೊಂಡು ಎರಡು ಹಾಗೂ ಮೂರು ಪದಭಾಗ (syllable)ಗಳ ಪದಗಳನ್ನು ರಚಿಸಲು ಹೇಳದೆವು. ಈ ಸುಳವು ಬಳಸಿಕೊಂಡು, ನನ್ನ ಮನಸ್ಸಿನಲ್ಲಿರುವ ಪದ ಯಾವುದು ಎಂದು ಊಹಿಸಲು ಸಾಧ್ಯವೇ? ಇದರಲ್ಲಿ ಸ್ವರಗಳಾದ S, T ಮತ್ತು M ಇದ್ದು, ಅದು ಕರ್ತವ್ಯ(ಡ್ಯೂಟಿ)ಕ್ಕೆ ಸಂಬಂಧಿಸಿದೆ.

ಇನ್ನೊಂದು ಪದ ರಚನೆ ಆಟವೆಂದರೆ, ಕೊಟ್ಟ ಪದದಿಂದ ಒಂದು ಅಕ್ಷರ ತೆಗೆದುಹಾಕಿ / ಸೇರಿಸಿ / ಬದಲಿಸಿ ಹೊಸ ಪದಗಳ ಸೃಷ್ಟಿ. ಉದಾಹರಣೆಗೆ, ನಾವು "Team ಪದ ಕೊಟ್ಟು ಒಂದು ಬಾರಿಗೆ ಒಂದು ಅಕ್ಷರವನ್ನು ಬದಲಿಸಿ, ಇನ್ನೂ ಐದು ಪದಗಳನ್ನು ರಚಿಸಲು ಸೂಚಿಸಿದೆವು. ಒಬ್ಬರು ಶಿಕ್ಷಕರು TEAM-BEAM-BEAT-BOAT-BOOT-HOOT ಎಂಬ ಪದಗಳನ್ನು ಸೃಷ್ಟಿಸಿದರು, ಅವುಗಳನ್ನೆಲ್ಲ ಜೋಡಿಸಿ, The TEAM followed the HOOT Sound in BOAT with BOOTS and BEAMED with BEAT, ವಾಕ್ಯವನ್ನು ರಚಿಸಿದರು.

**ಫಲಿತ**:

ಈ ಆಟಗಳನ್ನು ಮತ್ತು ಅದೇ ತರಹದ ಇನ್ನಿತರ ಆಟಗಳನ್ನು ಆರಂಭಿಸಿದ ಎರಡು ವಾರಗಳೊಳಗೆ ಫಲಿತಾಂಶ ಸ್ಫುಟವಾಗಿ ಕಾಣತೊಡಗಿತು. ಪಾಲ್ಗೊಳ್ಳುತ್ತಿದ್ದ ಆರರಿಂದ ಏಳು ಶಿಕ್ಷಕರು ಮೊದಲಿಗಿಂತ ಹೆಚ್ಚು ಸ್ನೇಹಿತರಾದರು. ನಾವು ಅವರನ್ನು ದೂರವಾಣಿಯಲ್ಲಿ ಸಂಪರ್ಕಿಸಿದಾಗ, ಅವರ ಧ್ವನಿಯಲ್ಲಿ ಸಡಗರ ಕಂಡುಬಂತು. ಬಹಳ ಕಾಲದ ಬಳಿಕ ನನ್ನ ಮಿದುಳನ್ನು ಬಳಸಿದೆ ಎಂದು ಶಿಕ್ಷಕರೊಬ್ಬರು ಹೇಳಿದರು. ಪ್ರತಿದಿನ ಈ ಆಟಗಳಿಗಾಗಿ ಕಾಯುತ್ತಿರುತ್ತೇನೆ ಎಂದು ಇನ್ನೊಬ್ಬ ಶಿಕ್ಷಕಿ ಹೇಳಿದರೆ, ನಿಗದಿಪಡಿಸಿದ ಸಮಯದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದ್ದರಿಂದ, ಆಟದ ಸಮಯವನ್ನು ಬದಲಿಸಬೇಕೆಂದು ಮತ್ತೊಬ್ಬರು ಕೇಳಿ–ಕೊಂಡರು. ತಾನು ನೇರವಾಗಿ ಪಾಲ್ಗೊಳ್ಳಲು ಸಾಧ್ಯವಾಗದಿದ್ದರೂ, ತನಗೆ ಸಮಯವಿದ್ದಾಗ ಅದನ್ನು ನೋಡಿ ಆಡಿದೆ ಎಂದು ನಾಲ್ಕನೆಯ ಶಿಕ್ಷಕಿ ಹೇಳಿದರು. ಅನಂತರ ಆನ್‌ಲೈನ್‌ನಲ್ಲಿ ನಡೆದ ಸಿಇಪಿಯ ೩ನೆಯ ಹಾಗೂ ಕೊನೆಯ ಸಭೆಯಲ್ಲಿ ಈ ಶಿಕ್ಷಕರ ಭಾಗವಹಿಸುವಿಕೆ ಎದ್ದುಕಾಣುವಂತೆ ಮೊದಲಿಗಿಂತ ಉತ್ತಮವಾಗಿತ್ತು.

ಅವರು ತಮ್ಮ ತರಗತಿಗಳಲ್ಲಿನ ಅನುಭವಗಳನ್ನು ಹಂಚಿಕೊಂಡರು, ಪಾಠಾವಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು ಹಾಗೂ ಉತ್ತಮ ಹಿಮ್ಮಾಹಿತಿ ನೀಡಿದರು. ಈ ಆಟಗಳು ಅವರ ಹೃದಯವನ್ನು ಮೀಟಿದ್ದವು ಮತ್ತು ನಮ್ಮಗಳ ಸಂಬಂಧವನ್ನು ಉತ್ತಮ–ಗೊಳಿಸಿದ್ದವು.

**ನನ್ನ ಪರ್ಯಾಲೋಚನೆ**:

ನಾವು ಶಿಕ್ಷಕರ ಶಿಕ್ಷಕರಾಗಿ ಕೆಲಸ ಮಾಡುತ್ತೇವಾದರೂ, ನಮ್ಮ ಕಾಳಜಿ ಇರುವುದು ವಿದ್ಯಾರ್ಥಿಗಳ ಮೇಲೆ. ಮತ್ತು, ಇದರಿಂದಾಗಿ, ವಿದ್ಯಾರ್ಥಿಗಳ ಪ್ರಸ್ತುತ ಗುಣಮಟ್ಟ (ಅವರು ಎಚ್ಚರವಿರುವ ಕಾಲದಲ್ಲಿ ಅರ್ಧ ಭಾಗವನ್ನು ಶಾಲೆಯಲ್ಲಿ ಕಳೆಯುತ್ತಾರೆ ಎಂಬುದನ್ನು ಪರಿಗಣಿಸಿ) ಮಾತ್ರವಲ್ಲದೆ, ಬಹುಮಟ್ಟಿಗೆ ಅವರ ಭವಿಷ್ಯದ ಗುಣಮಟ್ಟವನ್ನೂ ಕಂಡುಕೊಳ್ಳುವ ಸಾಮರ್ಥ್ಯ ನಮಗಿದೆ. ನಾವು ಶಿಕ್ಷಕರನ್ನು ಆರ್ಥಿಕವಾಗಿ ಸುಭದ್ರವಾದ ಸರ್ಕಾರಿ ಉದ್ಯೋಗ–ದಲ್ಲಿರುವ ಸ್ವತಂತ್ರ ಪ್ರಬುದ್ಧರೆಂದು ನೋಡುವುದರಿಂದ, ಅವರ ಬಗ್ಗೆ ನಮಗೆ ವಿದ್ಯಾರ್ಥಿಗಳ ಮೇಲಿರುವಷ್ಟು ಕಾಳಜಿ ಇರುವುದಿಲ್ಲ. ಹೀಗಾಗಿ, ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ಅನುಭವ ನೀಡ–ಬೇಕೆಂಬ ನಮ್ಮ ಗುರಿಯನ್ನು ತಲುಪಲು ಇರುವ ಮಾರ್ಗ ಶಿಕ್ಷಕರು ಎಂದು ನಾವು ಭಾವಿಸುವ ಸಾಧ್ಯತೆ ಇದೆ. ಆದರೆ, ಮೇಲಿನ ಅನುಭವ ಅದು ಹಾಗಲ್ಲ ಎಂದು ತೋರಿಸಿಕೊಟ್ಟಿತು.

ತಮ್ಮ ನಂಬಿಕೆಗಳು ಹಾಗೂ ಆಚರಣೆಗಳನ್ನು ಬದಲಿಸಿ–ಕೊಳ್ಳಬೇಕಾದ ಅಗತ್ಯವಿರುವ ವ್ಯಕ್ತಿಗಳಂತೆ ಶಿಕ್ಷಕರನ್ನು ನೋಡದೆ, ಅವರನ್ನು ಗಮನಿಸುವಿಕೆ ಹಾಗೂ ಸಂವಾದದ ಮೂಲಕ ಕಲಿಯಬಲ್ಲ, ಕಲಿತದ್ದನ್ನು ಪರಿಷ್ಕರಿಸಿಕೊಳ್ಳಬಲ್ಲ ಹಾಗೂ ಹೊಸ ಕಲಿಕೆ ಮಾಡಬಲ್ಲ ಸಾಮರ್ಥ್ಯವಿರುವ ಸ್ವಾಯತ್ತ, ತಾರ್ಕಿಕ ವ್ಯಕ್ತಿಗಳು ಎಂದು ನಾವು ಪರಿಗಣಿಸಬೇಕಿದೆ. ಅವರು ಫಲಿತಾಂಶ ನೀಡುವ ವೃತ್ತಿಪರರು ಮಾತ್ರವಲ್ಲದೆ, ಎಲ್ಲರಂತೆ ನಾನಾ ಜವಾಬ್ದಾರಿಗಳನ್ನು ನಿರ್ವಹಿಸುತ್ತಿರುವ ಮತ್ತು ಹಲವು ಅಗತ್ಯಗಳನ್ನು ನಿಭಾಯಿ–ಸುತ್ತಿರುವ ಮನುಷ್ಯರು ಎಂದು ನೋಡಬೇಕಾಗುತ್ತದೆ. ಅವರ ಅಗತ್ಯಗಳಲ್ಲಿ ವಿರಾಮ, ತಮಾಷೆ ಮತ್ತು ಆಟ ಇರಬೇಕಿದ್ದು, ಕಲಿಸುವ ವಿಷಯದ ಬಗ್ಗೆ ಹೆಚ್ಚು ತಿಳುವಳಿಕೆ ಹೊಂದಲು ಇದು ಇನ್ನೊಂದು ಮಾರ್ಗವೆಂದಾದರೂ ಬೇಕಾಗಿದೆ.

**ಉತ್ತರಗಳು**: ರಿಬಸ್: Broken Promise, A Friend in need; Travel over seas

ಒಗಟುಗಳು: Tuesday, Thursday, Today, Tomorrow, Incorrectly, ಇದೊಂದು ಪ್ರಶ್ನೆಯಲ್ಲದ ಕಾರಣ ಉತ್ತರದ ಅಗತ್ಯವಿಲ್ಲ: ಆತನ ಮಗ

ಸಾದೃಶ್ಯತೆ: ಬಿ,ಎ,ಬಿ

ಹಸುಗಳು ಮತ್ತು ಹೋರಿಗಳು: Song

ಸರಿಯಾದ ಪದ ಯಾವುದು?: Humour

ಪದ ರಚನೆ ಆಟಗಳು: Must

**ಸಂಪನ್ಮೂಲಗಳು**: Cows and bulls game:https://youtu.be/ydpnUviPPWE

**ಮೂಲಗಳು**: ರಿಬಸ್ ಒಗಟು: ರಿಬಸ್ ಪಜಲ್ಸ್: ಜೈನ್‌ಕೋ ಪಬ್ಲಿಷರ್ಸ್, ದಿಲ್ಲಿ
ಭಾಷಾ ಒಗಟುಗಳು ಲಾಂಗ್ವೇಜ್ ರಿಡಲ್ಸ್: ಇಂಟರ್ನೆಟ್‌ನ ನಾನಾ ತಾಣಗಳು
ಸಾದೃಶ್ಯದ ಒಗಟುಗಳು: ಅನಾಲಜಿ ಪಜಲ್ಸ್, ಜೈನ್‌ಕೋ ಪಬ್ಲಿಷರ್ಸ್, ದಿಲ್ಲಿ

**ವರ್ಲ್ಡ್ ಸ್ಕ್ರ್ಯಾಂಬಲ್**: <https://www.treevalleyacademy.com/back-to-school-unscramble/>




**ವಿವೇಕ್ ಸುಂದರ್ ಪಿಳ್ಳೈ** ಪಾಂಡಿಚೆರಿಯ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಜಿಲ್ಲಾ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ(ಇಂಗ್ಲಿಷ್ ಭಾಷೆ). ಸುಮಾರು ನಾಲ್ಕು ವರ್ಷದಿಂದ ಫೌಂಡೇಷನ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೆ ಮುನ್ನ ಪರ್ಯಾಯ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸುತ್ತಿದ್ದರು. ಶಿಕ್ಷಣದ ಬಗ್ಗೆ ತೀವ್ರ ಆಸಕ್ತಿಯನ್ನು ಹೊಂದಿದ್ದು, ಕಲಿಕೆಯನ್ನು ಅರ್ಥಪೂರ್ಣ, ಸ್ವಾಭಾವಿಕ ಹಾಗೂ ಪರಿಪೂರ್ಣವಾಗಿಸುವ ಮಾರ್ಗಗಳ ಬಗ್ಗೆ ಸದಾ ಚಿಂತನೆ ನಡೆಸುತ್ತಾರೆ. ಇವರನ್ನು vivek.pillai@azimpremjifoundation.org ಮೂಲಕ ಸಂಪರ್ಕಿಸ ಬಹುದು.

ಅನುವಾದ: **ಮಾಧವ ಐತಾಳ್** । ಪರಿಶೀಲನೆ: **ಜಯಕುಮಾರ್ ಮರಿಯಪ್ಪ**